ಸಾಕ್ಷಿಯನ್ನು ಪುನಃ ದಿನಾಂಕಃ19.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ

ಚಿಕ್ಕವರದೇಗೌಡ ನನ್ನ ತಾತಾ. ಕುಮಾರ ನನ್ನ ಸೋದರ ಮಾವ. ನಾನು ಗಾಡಿ ಹೊಡೆದುಕೊಂಡು ಹೋಗುತ್ತಿದ್ದ ಸಮಯದಲ್ಲಿ ಬೇರೆ ಜನರು ಇರಲಿಲ್ಲ ನನಗೆ ಕುಡುಗೋಲು ಅಥವಾ ಮಚ್ಚಿನಿಂದ ಪೆಟ್ಟಾಗಿರುವುದಿಲ್ಲ. ದೂರನ್ನು ಯಾರ ಬಳಿ ಬರೆಸಿದೆ ಎಂದು ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ನೆನಪಿರುವುದಿಲ್ಲ. ನನಗೆ ಸ್ಕೂಟರಿನಲ್ಲಿ ಬಿದ್ದು ಗಾಯವಾಗಿರುವುದಿಲ್ಲ. ಆರೋಪಿಗೆ ಸೇರಿದ ಆರ್.ಸಿ.ಸಿ. ಮನೆಗೆ ಒಂದು ಗೇಟ್ ಇರುತ್ತದೆ. ಪುನಃ ಸಾಕ್ಷಿ ಒಂದು ಸಣ್ಣ ಗೇಟ್ ಸಹ ಇರುತ್ತದೆ ಎಂದು ನುಡಿಯುತ್ತಾರೆ.

2. ಆ ದಿನ ನಾನು, ಕುಮಾರ ಮತ್ತು ಚಿಕ್ಕವರದೇಗೌಡ ಮೂರು ಜನರು ಸೇರಿ ಆರೋಪಿ ಜೊತೆ ಗಲಾಟೆ ಮಾಡುವ ಉದ್ದೇಶದಿಂದ ಆತನ ಮನೆಗೆ ಅಕ್ರಮವಾಗಿ ಹೋದೆವು ಎಂದರೆ ಸರಿಯಲ್ಲ. ನಾವು ಗಲಾಟೆ ಮಾಡಲು ಬಂದಾಗ ಆರೋಪಿತರು ಜಮೀನೀಗೆ ಸಂಬಂಧಪಟ್ಟ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಕೊಡಿ ಎಂದು ಚಾಸಾ-3 ರವರಿಗೆ ಹೇಳಿದರು ಎಂದರೆ ಸರಿಯಲ್ಲ. ಆರೋಪಿತರು ಮನೆ ಕಟ್ಟಿದ ನಂತರ ಸಿಮೆಂಟ್ ಇಟ್ಟಿಗೆಗಳನ್ನು ಮನೆಯ ಬಳಿ ಇಟ್ಟಿದ್ದರು ಎಂದರೆ ಸರಿಯಲ್ಲ.

3. ನಾನು ಆರೋಪಿ ಮನೆ ಬಳಿಯಿದ್ದ ಸಿಮೆಂಟ್ ಇಟ್ಟಿಗೆಯನ್ನು ತೆಗೆದು 1ನೇ ಆರೋಪಿಗೆ ಹೊಡೆಯಲು ಹೋದಾಗ, ಆತನ ಹೆಂಡತಿ 2ನೇ ಆರೋಪಿ ಆತನನ್ನು ಎಳೆದುಕೊಂಡಾಗ, ಇಟ್ಟಿಗೆ 1ನೇ ಆರೋಪಿಯ ಮೇಲೆ ಬಿದ್ದು, ಅವರಿಗೆ ಮೂಗಿನ ಮೇಲೆ ಹಾಗೂ ಬಲಗಾಲಿನ ಬೆರಳು ಜಜ್ಜಿ ಹೋಯಿತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆಯಿದ್ದ ಕುಮಾರ/ ಚಾಸಾ-2 1ನೇ ಆರೇಪಿಯ ಎಡತೋಳಿನ ಮೇಲೆ ಹೊಡೆದನು ಎಂದರೆ ಸರಿಯಲ್ಲ. 2ನೇ ಆರೋಪಿ ಬಿಡಿಸಲು ಬಂದಾಗ, ಚಾಸಾ-2 ಮತ್ತು 4 ಆಕೆಯ ಜುಟ್ಟು ಹಿಡಿದುಕೊಂಡು ಎಳೆದಾಡಿ ಬೆನ್ನು ಮೇಲೆ ಹೊಡೆದು ಹಲ್ಲೆ ಮಾಡಿದರು ಎಂದರೆ ಸರಿಯಲ್ಲ.

**4.** ಈ ಹಂತದಲ್ಲಿ ಸಾಕ್ಷಿಗೆ **1**ನೇ ಆರೋಪಿಯ ಫೋಟೋ ಎಂದು ತೋರಿಸಿದಾಗ ಸಾಕ್ಷಿ **1**ನೇ ಆರೋಪಿಯನ್ನು ಗುರುತಿಸಿದ್ದರಿಂದ ಸದರಿ ಫೋಟೋವನ್ನು ನಿಡಿ**-1** ಎಂದು ಗುರುತಿಸಲಾಯಿತು. ಅದೇ ಸಂದರ್ಭದಲ್ಲಿ ಇನ್ನೊಂದು ಫೋಟೋವನ್ನು ಸಾಕ್ಷಿಗೆ ತೋರಿಸಿದಾಗ ಸದರಿ ಫೋಟೋ **1**ನೇ ಆರೊಪಿಗೆ ಸೇರಿದ್ದು ಎಂದು ತೋರಿಸಿದ್ದು, ಅದನ್ನು ನಿಡಿ**-2** ಎಂದು, ಇನ್ನೊಂದು ಫೋಟೊವಿನಲ್ಲಿ **1**ನೇ ಆರೋಪಿಗೆ ಆಗ ಗಾಯವಾಗಿದ್ದು, ಸಾಕ್ಷಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಸದರಿ ಫೊಟೋವನ್ನು ನಿಡಿ**-3** ಎಂದುಗುರುತಿಸಲಾಯಿತು.

**5.** ಆ ದಿನ ನಾನು ಮತ್ತು ಚಾಸಾ**-2** ಮತ್ತು **3** ಸೇರಿ ಆರೋಪಿತರ ಮೇಲೆ ಗಲಾಟೆ ಮಡಿ **1**ನೇ ಆರೊಪಿ ಮೇಲೇ ಹಲ್ಲೆ ಮಾಡಿ ರಕ್ತಗಾಯಪಡಿಸಿದ್ದು, ಓಡಿ ಹೋಗಲು ಪ್ರಯತ್ನಿಸಿದಾಗ ಗೇಟು ತಾಗಿ ನನ್ನ ಕೈಗೆ ಏಟಾಗಿರುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳುತ್ತಿರುವ ಊರಿನಿಂದ ಕೊಪ್ಪ ಆಸ್ಪತ್ರೆ **7** ಕಿ.ಮೀ. ದೂರವಾಗುತ್ತದೆ. ನಾನು ಕೊಪ್ಪ ಆಸ್ಪತ್ರೆಗೆ ಹೋಗಿದ್ದೆ ಮತ್ತು ವೈದ್ಯರಿಗೆ ಘಟನೆಯ ಬಗ್ಗೆ ಹೇಳಿದ್ದೆ. ಅಲ್ಲಿ ಬ್ಯಾಂಡೇಜ್ ಮಾತ್ರ ಹಾಕಿ ಚಿಕಿತ್ಸೆ ನೀಡಿರುವುದಿಲ್ಲ. ಆಸ್ಪತ್ರೆಗೆ **1**ನೇ ಆರೋಪಿ ಬಂದಿದ್ದ ಎಂದರೆ ಸಾಕ್ಷಿ ಪೊಲೀಸ್ ಠಾಣೆಗೆ ಬಂದಿದ್ದ ಎಂದು ನುಡಿಯುತ್ತಾರೆ.

**6.** ನಾನು ಕೊಪ್ಪ ಆಸ್ಪತ್ರೆಗೆ ಆಗಲೀ ಮಂಡ್ಯದ ಆಸ್ಪತ್ರೆಗಾಗಲೀ ಹೋಗಿಲ್ಲ ಎಂದರೆ ಸರಿಯಲ್ಲ. ಆ ದಿನ **1**ನೇ ಆರೋಪಿಗೆ ಆಗಿದ್ದ ಗಾಯದಿಂದ ರಕ್ತಸ್ರಾವ ಆಗಿದ್ದ ಕಾರಣ ಆತ ಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ನಂತರ ಮಂಡ್ಯ ತದನಂತರ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

**7.** **1**ನೇ ಆರೋಪಿ ಮೈಸೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದುದರಿಂದ ಮತ್ತು ಆತನಿಗೆ ಹೆಚ್ಚು ಗಾಯವಾಗಿದ್ದ ಕಾರಣ ನನ್ನ ವಿರುದ್ದ ದೂರು ನೀಡುತ್ತಾರೆ ಮತ್ತು ನನಗೆ ತೊಂದರೆಯಾಗುತ್ತದೆ ಎನ್ನುವ ಉದ್ದೇಶದಿಂದ ಆರೋಪಿ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. **1**ನೇ ಆರೋಪಿಗೆ ವಯಸ್ಸಾಗಿರುತ್ತದೆ ಎಂದರೆ ಸರಿ. **1**ನೇ ಆರೋಪಿಗೆ ನನ್ನ ಮೇಲೆ ಹಲ್ಲೆ ಮಾಡುವ ಶಕ್ತಿಯೂ ಸಹ ಇರುವುದಿಲ್ಲ ಎಂದರೆ ಸರಿಯಲ್ಲ. **1**ನೇ ಆರೋಪಿ ನನ್ನ ಮೇಲೆ ಕೊಡಲಿಯಿಂದ ಹೊಡೆದನು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**8.** ಆರೋಪಿತರು ನನ್ನ ಮೇಲೇ ದಾಖಲು ಮಾಡಿರುವ ಪ್ರಕರಣದಿಂದ ಬಚಾವ್ ಆಗಲು ನನ್ನ ಮನೆಯಲ್ಲಿದ್ದಂತಹ ಕೊಡಲಿಯನ್ನು ಪೊಲೀಸರಿಗೆ ನೀಡಿ, ಆದರಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆ ಊರಿನಲ್ಲಿ ವಾಸವಿದ್ದರೂ ಸಹ ಹಾಗೂ ಹೊಸಕೊಪ್ಪಲಿನಲ್ಲಿ ವಾಸವಿಲ್ಲದಿದ್ದರೂ ಸಹ ಆರೋಪಿತರ ಮೇಲೆ ಜಗಳ ಮಾಡಲು ಅವರ ಮನೆ ಬಳಿ ಹೋಗಿ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. 3 ಮತ್ತು 4ನೇ ಆರೋಪಿತರು ಬೆಂಗಳೂರಿನ ನಿವಾಸಿ ಆಗಿದ್ದರೂ ಸಹ ಅವರನ್ನು ಉದ್ದೇಶ ಪೂರ್ವಕವಾಗಿ ಈ ಪ್ರಕರಣದಲಿಲ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೇ ಯಾವುದೇ ಹಲ್ಲೆ ಹಾಗೂ ಗಲಾಟೆ ಮಾಡದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.